ಬಂದರು. ಅವರಿಂದೆ ನಿಂತಿದ್ದ ಹೊನ್ನವಳ್ಳಿ ಹುಚ್ಚಪ್ಪ ಇದೇನೋ ಇವಮ್ಮನ್ನೇ ಗುರಿ ಮಾಡುತ್ತಿದ್ದಾರೆ ಅನ್ನಿಸಿ ಮಧ್ಯ ಬಾಯಾಕಿ, 'ಯಾರ್ ಕೈವಾಡವೋ ಏನೋ? ಇದಕ್ಕೆ ದಾರಿ ಕೆಟ್ಟುಹೋಯಿತೋ ಏನೋ?' ಎಂದನು. ಅಲ್ಲಿ ತನಿಖೆ ಮಾಡುತ್ತಿದ್ದ ಪೊಲೀಸ್ ಅಧಿಕಾರಿಗೆ ಪಿತ್ತ ನೆತ್ತಿಗೇರಿ ಕೆಂಗಣ್ಣು ಬಿಟ್ಟರು. ಇದನ್ನು ನೋಡಿ ಹೆದರಿದ ಗವಿರಂಗಣ್ಣ 'ಸುಮ್ನಿರ್ಲ' ಎಂದು ಹುಚ್ಚಪ್ಪನನ್ನು ಗದರಿದನು. ಗವಿರಂಗಣ್ಣನ ಆ ದನಿಗೆ ಬೆಚ್ಚಿದ ಹುಚ್ಚಪ್ಪ 'ಅಯ್ಯೋ ಎಲ್ಲಿ ತಪ್ಪಾಯ್ತೋ' ಎಂದು ಬೆಪ್ಪಾಗಿ ನಿಂತ. ಕರುಳು ಚುರುಕ್ ಎಂದು ಗವಿರಂಗಣ್ಣ ಮಾತಾಡಿದ. ದುಡಿವ ಜೀವಗಳೊಡನೆ ನಗುತ್ತಾ ಅವರನ್ನೂ ನಗಿಸುತ್ತಾ ಪರಿಶ್ರಮದಿಂದ ಒಳಗೆ, ಹೊರಗೆ ಎಲ್ಲರೊಳಗೊಂದಾಗಿ ಅಂತಃಕರಣ ಗೆದ್ದಿದ್ದ ನಮ್ಮ ಸಿದ್ದ. ಪೊಲೀಸ್ ಅಧಿಕಾರಿ 'ನೀವಿಲ್ಲಿ ಏನೇಳ್ತಿದ್ದೀರಿ... ಅದನ್ನೇ ಸ್ಟೇಷನ್‌ನಲ್ಲಿ ಬಂದು ಹೇಳಬೇಕು' ಎಂದು ಅತ್ತ ಹೆಜ್ಜೆ ತೆಗೆದರು.

ಅಲ್ಲಿದ್ದ ನಾಲ್ಕಾರು ಜನ ಊರ ಹಿರಿಯರನ್ನು, ಸಿದ್ದನ ಹೆಂಡತಿಯನ್ನು ಪೊಲೀಸ್ ಜೀಪಿಗೆ ಹತ್ತಿಸಿಕೊಂಡರು. ಅಲ್ಲಿದ್ದ ಒಂದಷ್ಟು ಮಂದಿ ಆ ದೇವರು ಬೇಗ ದೀಪ ಹಾರಿಸಿಬಿಟ್ಟ. 'ಥೂ' ಎಂದರು. ಹೆಂಗಸರು ಮಕ್ಕಳು ಗೋಳೋ ಎಂದು ಜೋರಾಗಿ ಅಳುತ್ತಿದ್ದರು. ಭಯದಿಂದಾಗಿ ನಡುಗುತ್ತಿದ್ದರು. ಆಂಬುಲೆನ್ಸ್ ಮುಂದೆ ಸಾಗಿತು. ಅದರ ಹಿಂದೆ ಪೊಲೀಸ್ ಜೀಪುಗಳೂ ಹೋದವು. ಊರವರು ಈ ಖೂನಿ ಮಾಡಿರುವುದು ಯಾರೆಂದು ಪತ್ತೆ ಹಚ್ಚಲು ಅಲ್ಲಲ್ಲಿ ಮಾತಾಡುತ್ತಾ, ಹುಡುಕುತ್ತಾ ಹೆಣಗಾಡುತ್ತಿದ್ದರು. ಪೊಲೀಸರು, ಕೆಲ ಮುಖಂಡರು ಮತ್ತು ಅನುಮಾನ ಬಂದ ವ್ಯಕ್ತಿಗಳನ್ನು ಎತ್ತಾಕಿಕೊಂಡು ಹೋಗಿ ವಿಚಾರಣೆ ನಡೆಸುತ್ತಿದ್ದರು.

ಊರಿಗೆ ಹೊಸದಾಗಿ ಬಂದಿದ್ದ ನಾಯಕರ ಪೈಕಿ ರಂಗ, ಮಲ್ಲನ ಒಪ್ಪಾರಿನಲ್ಲಿದ್ದ. ಸಿದ್ದ ಕಾಣೆಯಾದ ದಿನದಿಂದಲೂ ರಂಗ ಸಹ ಕಾಣಿಸುತ್ತಿಲ್ಲ ಎಂಬುದನ್ನು ಕುಂತಲ್ಲೇ ಊರ ವಿಚಾರಗಳನ್ನು ಗಮನಿಸುತ್ತಿದ್ದ ಈ ಕೊರಮರ ಗಂಗಜ್ಜ ಪೊಲೀಸ್‌ನವರಿಗೆ ಮಾಹಿತಿ ಕೊಟ್ಟ. ಈ ಮಾಹಿತಿಯಿಂದ ಅವನನ್ನು ಪತ್ತೆ ಹಚ್ಚಿ ಠಾಣೆಗೆ ಎಳೆದೊಯ್ದ ಪೊಲೀಸರು ಮುಂಬೈಗೋಲಿ ಟ್ರೀಟ್‌ಮೆಂಟ್ ಕೊಟ್ಟಿದ್ದರ ಪರಿಣಾಮ ಕೊಲೆಯ ಸುಳಿವು ಕೊಟ್ಟ. ಆದರೆ ರಂಗನ ಮುಖವನ್ನು ಊರವರು ಅಷ್ಟಾಗಿ ಯಾರೂ ಕಂಡಿರಲಿಲ್ಲ. ಪೊಲೀಸಿನವರ ಕೈಗೆ ಸಿಕ್ಕಿದ್ದಾನೆ ಎಂಬುದಷ್ಟೇ ಸುದ್ದಿ. ಈ ನಡುವೆ ಹೆಚ್ಚಿನ ವಿಚಾರಣೆಗಾಗಿ ಮಲ್ಲ, ಅವನ ಹೆಂಡತಿ, ಅವನ ಬಾಮೈದ ಎಲ್ಲರನ್ನೂ ಪೊಲೀಸ್ ಜೀಪಿನಲ್ಲಿ ತುಂಬಿಕೊಂಡು ಹೋಗಿದ್ದರು.

* * *

ಮೊದಲಿನಷ್ಟು ಮಲೆಯಮ್ಮನ ಬಾಯಿ ಜೋರಿರಲಿಲ್ಲ. ಈ ಗಂಗಜ್ಜ ಕಣ್ಣು ಕಾಣದಿದ್ದರೂ ಕುಕ್ಕೆ ಮಾತ್ರ ಚೆನ್ನಾಗಿಯೇ ಹೆಣೆಯುತ್ತಾನೆ. ಕಲೆ ಅನ್ನೋದು ಕೈಗಂಟಿದ್ದರಿಂದ ಕಸುಬು ಬೇಕೋ ಬೇಡವೋ; ಆದರೆ ಇದು ಹುಟ್ಟಿಗೆ ಅಂಟಿಕೊಂಡು ಬಂದಿದ್ದರಿಂದಲೋ ಏನೋ ಅವನು ಕೈಲಾಗದಿದ್ದರೂ ವೃತ್ತಿ ಬಿಟ್ಟಿರಲಿಲ್ಲ. ದನ ಕರು ವಪ್ಪಾರು ಎಲ್ಲ ಬದಲಾದರೂ ಇವನು ಮಾತ್ರ ಹೀಗೆ. ಮಲೆಯಮ್ಮ ಕಣ್ಣು ಕಾಣದಿದ್ದರೂ ಈಗಲೂ ಬಿಮ್ಮನ್ಸಿಯರ ಮುಟ್ಟಿ ತಟ್ಟಿ ಮಾತನಾಡಿಸುತ್ತಾಳೆ. ಮೈಬಗ್ಗಿಸಿ ನೀರು ಚೆನ್ನಾಗಿ ಕಡಸಿದರೆ ಹೆರಿಗೆ ಕಾಲದಲ್ಲಿ ಅಷ್ಟು ಕಷ್ಟ ಆಗಲ್ಲ ಅಂತ ಸೋಮಾರಿ ಹೆಣ್ಣುಮಕ್ಕಳಿಗೆ ಹೇಳುವುದನ್ನು ಮಲೆಯಮ್ಮ ಮರೆಯಲಿಲ್ಲ.

ಇವಳು ದಾರಿಯಲ್ಲಿ ಓಡಾಡುವಾಗ ಎದುರು ಸಿಕ್ಕ ಶಂಕರನನ್ನು ಮಾತನಾಡಿಸಿ ತಲೆ ಸವರಿ 'ಯಾರ್ ಮಗ್ನೋ...? ಓ... ನಮ್ಮ ಕಾಳಮ್ಮನ ಮಗನೋ, ಇಷ್ಟು ದಪ್ಪ ತಲೆ, ಎಷ್ಟ್ ದಪ್ಪ ಮಾಡವಳೆ ನೋಡು ನಿಮ್ಮವ್ವ; ನೀನೂ ಅವಳ್ನ ಚೆನ್ನಾಗಿ ನೋಡ್ಕೋ, ಹೆರಿಗೆ ಸಮಯದಲ್ಲಿ ನೀನು ಅವಳ್ಗೆ ನಾಲ್ಕು ದಿನ ಕಷ್ಟಕೊಟ್ಟಿದ್ದೆ ಗೊತ್ತಾ? ನೀನು ಹುಟ್ಟಿದಾಗ ನೆತ್ತಿ ಎತ್ತಿದ್ದು ನಾನೇ ಕಣೋ' ಎಂದು ಹೇಳಿ ನಿನ್ನ ಬದುಕಿಗೆ ನೀನೇ ಬೆಳಕು. ನಿನ್ನೊಳಗೆ ನೀನಿದ್ದರೆ ಅದೇ ದಾರಿ ಎಂದು ತಲೆ ಸವರಿ ಬೀಳ್ಕೊಟ್ಟಳು.

ಹೆಣ್ಣೊಬ್ಬಳ ಹೆರಿಗೆಯಂಥ ಅತ್ಯಂತ ಸಂಕಟದ ಸಮಯದಲ್ಲಿ ಒದಗಿ ಬರುತ್ತಿದ್ದ ಮಲೆಯಮ್ಮನನ್ನು ಹಳ್ಳಿಯ ಮಾತೆಯಂತೆ ಜನ ನೋಡುತ್ತಿದ್ದರು. ಹೆರಿಗೆಯ ನೋವನ್ನು ಅನುಭವಿಸುತ್ತಿದ್ದ ಬಸುರಿಯರು ಅವಳ ಸ್ಪರ್ಶ ಮಾತ್ರದಿಂದಲೇ ನೋವನ್ನು ಮರೆತುಬಿಡುತ್ತಿದ್ದರು. ಅವಳ ಸಂತೈಸುವ ರೀತಿಗೆ ಅವಳಲ್ಲಿ ತಮ್ಮ ತಾಯಿಯನ್ನೇ ಕಾಣುತ್ತಿದ್ದರು. ಹೀಗೆ ಎಲ್ಲರ ತಾಯಾಗಿ ಉಳಿದ ಮಲೆಯಮ್ಮನಿಗೆ ಈಗ ಕಣ್ಣು ಕಾಣುತ್ತಿಲ್ಲ.

ಅಲ್ಲೆಲ್ಲೋ ಸೊಂಪಲಲ್ಲಿ ನಾಯಿಗಳು ಬೊಗಳುತ್ತಿದ್ದವು. ಬಸವ ಬರುತ್ತಿರುವ ಸೂಚನೆ ಸಿಕ್ಕ ಜನ ಈ ಅಜ್ಜಿಯನ್ನು 'ಅಜ್ಜಿ ವಾರಾಸು, ವಾರಾಸು' ಎಂದು ಕಿರುಚುತ್ತಿದ್ದರು. ಅಲ್ಲೊಬ್ಬಳು ಮನೆ ಸೂರ ಕೆಳಗೆ ಕುಳಿತು ಅವರೇ ಸುಲಿದ ಸಿಪ್ಪೆಯನ್ನು ಮೊರಕ್ಕೆ ತುಂಬಿಕೊಂಡು ಬೀದಿ ದನ ಕರಿಗೆ ಸುರಿಯೋಕೆ ಅಂತ ಆಚೆಕೆ ಬಂದವಳು, ಈ ಕೂಗಾಟ ಅರಚಾಟ ಎಲ್ಲ ಗಮನಿಸಿ ಆ ಬೀದಿಕಡೆಕೆ ನೋಡಿದಳು. ಈ ಮಲೆಯಮ್ಮನಿಗೆ ಕಣ್ಣೂ ಕಾಣಲ್ಲ, ಕೂಗಿದರೆ ಕಿವಿನೂ ಕೇಳಲ್ಲ, ಈ ಹಾಳಾದ್ ಬಸವ ಬೇರೆ ನುಗ್ಗುತ್ತೈತೆ. ಅವಳನ್ನ ಕಾಪಾಡೋದೆಂಗೆ ಶಿವನೆ ಅಂತ ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದಳು. ಅತ್ತಿತ್ತ ಹೋಗುತ್ತಿದ್ದವರು, ಬರುತ್ತಿದ್ದವರು ಮಲೆಯಮ್ಮ ಬೇಗ ಬೇಗ ಹೆಜ್ಜೆ ಹಾಕದೆ ಇದ್ದುದರಿಂದ ಅಲ್ಲಿದ್ದವರಿಗೆಲ್ಲಾ ಆತಂಕ ಮೂಡಿ ಅವಳನ್ನ ಯಂಗಪ್ಪಾ ಕಾಪಾಡದು ಅಂತ ಒಬ್ಬೊಬ್ಬರೊಂದೊಂದು ವಿಚಾರ ಮಾಡುತ್ತಾ ಜೀವ ಬಿಡುತ್ತಿದ್ದರು.

ಬಸವನ ನೋಡಿ ಜನ ಬೆಚ್ಚಿದರು. ಅದು ಅಷ್ಟು ದೈತ್ಯ. ಈವಮ್ಮನ ಮೈಮೇಲೆ ಬಿದ್ದರೆ ಈವತ್ತು ಜೀವಂತ ಉಳಿಸುವುದಿಲ್ಲ. ತಿವಿಯುತ್ತೆ. ಕೋಡಲ್ಲಿ ಎತ್ತಿ ಎತ್ತಗಾರ ಎಸೆಯುತ್ತೆ. ಜೀವ ತೆಗೆಯುತ್ತೆ ಎಂದು ಒಬ್ಬೊಬ್ಬರೂ ಊಹಿಸಿಕೊಂಡು ಆತಂಕಪಡುತ್ತಿದ್ದರು. ಅವಳನ್ನು ಕಾಪಾಡಲು ಹತ್ತಿರ ಹೋಗೋದು ಅಷ್ಟು ಸುಲಭದ್ದಾಗಿರಲಿಲ್ಲ. ಜನ ಹತ್ತಿರ ಹೋಗಲಾಗದಿದ್ದರೂ ಬೀದಿಯಲ್ಲಿ ಹತ್ತು ಹಲವು ಮಾತುಗಳು. ಅವಳ ಹತ್ತಿರವೇ ನಿಂತ ಬಸವ ಕಾಲಲ್ಲಿ ನೆಲ ಕೆರೆಯುತ್ತ, ಕತ್ತು ಅತ್ತಿತ್ತ ಅಲ್ಲಾಡಿಸುತ್ತಿತ್ತು.

ಅಲ್ಲಿ ನಿಂತ ಜನ ಹೆಗಲ ಮೇಲಿನ ಟವಲ್ ಹಿಡಿದು ಹಾರಿಸಿ ಹೇ ಹೇ ಎಂದು ಬಸವನನ್ನು ಗದರಿಸುತ್ತಿದ್ದರು. ಕೆಲವರಂತೂ ನಾ ಮುಂದು ತಾ ಮುಂದು ಎಂದು ಉಟ್ಟ ಬಟ್ಟೆಯನ್ನು ಬಿಚ್ಚಿ ಬಾವುಟದಂತೆ ವೃತ್ತಾಕಾರವಾಗಿ ಆಡಿಸುತ್ತಿದ್ದರು. ಬಸವ ಮಲೆಯಮ್ಮನನ್ನು ಎದುರುಗೊಳ್ಳುತ್ತಲೇ ಇತ್ತು. ಬೀದಿಯಲ್ಲಿ ನಿಂತ ಜನ ಅಯ್ಯೋ ಅವಳಿಗೆ ಕಣ್ಣು ಕಾಣಲ್ಲ, ಕಿವಿ ಕೇಳಲ್ಲ ಎಂದು ಪೇಚಾಡುತ್ತಿದ್ದರು. ಮನೆ ಮನೆ ಬಾಗಿಲಲ್ಲಿ ನಿಂತ ಹೆಂಗಸರು ಮಕ್ಕಳು ಗೋಳಾಡುತ್ತಿದ್ದರು. ಕೆಲವರ ಕೋಪವಂತೂ ನೆತ್ತಿಗೇರಿ ಸಿಕ್‌ಸಿಕ್ಕಿದ ವಸ್ತುಗಳನ್ನೆಲ್ಲ ಬಸವನ ಮೈಮೇಲೆ ತೂರುತ್ತಿದ್ದರು.

ಕೆಂಪು ಬಟ್ಟೆ ಹಾಕಿಕೊಂಡು ಹೋರಿ ಮುಂದೆ ಹೋದರೆ ಅಟ್ಟಿಸಿ ಬರುತ್ತದೆ ಎಂದು ಸಿನಿಮಾದಲ್ಲಿ ನೋಡಿದ್ದನ್ನು ಕೊರಮರ ಹುಡುಗರು ನೆನಪಿಸಿಕೊಂಡು, ಅಲ್ಲೇ ನಿಂತಿದ್ದ ಕಾಳಮ್ಮಜ್ಜಿ ಶಂಕ್ರನಿಗೆ ಅವರವ್ವನ ಕೆಂಪು ಸೀರೆ ಉಡಿಸಿ ಬಸವನ ಹತ್ತಿರ ಬಿಟ್ಟರು. ಶಂಕ್ರನು ಹೆದರುತ್ತೆದರುತ್ತಲೇ ಬಸವನ ಹತ್ತಿರ ಹೋಗಿ ತಾನು ತೊಟ್ಟು ಬಂದಿದ್ದ ಸೀರೆಯನ್ನು ನಾಲ್ಕೈದು ಸಾರಿ ಮೇಲೆ ಕೆಳಗೆ ಎತ್ತಿ ಎತ್ತಿ ಬಸವನಿಗೆ ಆಟ ಆಡಿಸಿದ. ಇದಕ್ಕೆ ಕೆರಳಿದ ಬಸವ ಹೂಂಕರಿಸಿ ಕೊಂಬುಗಳಲ್ಲಿ ತಿವಿಯುವಂತೆ ಮಾಡಿ ಮುಂದೆ ನಾಲ್ಕೆಜ್ಜೆ ಹಾಕಿದ್ದೇ ತಡ ಬೆದರಿ ಓಡಲೆತ್ನಿಸಿದ ಶಂಕರ ಉಟ್ಟ ಸೀರೆ ಕಳಚಿ ಕಾಲಿಗೆ ತೊಡರಿ ಮುಗ್ಗರಿಸಿ ಅಲ್ಲೇ ಬಿದ್ದ. ಶಂಕರನ ಪೇಚಾಟವನ್ನು ಕಂಡ ಆ ನಾಯಕರ, ಆ ಕೊರಮರ ಗುಂಪು ಅವನನ್ನು ಬಾಚಿಕೊಂಡು ಅತ್ತ ಓಡಿದರು. ಎದ್ದು ಯಾರೇನೇ ಮಾಡಿದರೂ ಬಸವ ಮಾತ್ರ ಜಪ್ಪಯ್ಯ ಅನ್ನಲಿಲ್ಲ.

ಊರ ಜನ ತೂರುವ ಕಲ್ಲು, ದೊಣ್ಣೆ ಎಲ್ಲಾ ಏಟುಗಳನ್ನು ಕತ್ತಲ್ಲಾಡಿಸಿ ತಪ್ಪಿಸಿಕೊಂಡು ನಟ್ಟ ನಡುದಾರಿಯಲ್ಲಿ ಬಸವ ನಡೆಯುತ್ತಿತ್ತು. ಬಸವನ ಹತ್ತಿರ ಬಂದು ಹೆದರಿಸಲು, ಹೊಡೆಯಲು ಯಾರಿಗೂ ಧೈರ್ಯವಿರಲಿಲ್ಲ. ಅದರ ಮೈನ ಒಂದು ರೋಮ ಕೂಡ ಕೊಂಕಲಿಲ್ಲ. ಅದರ ನಡಿಗೆಯ ಧೀಮಂತಿಕೆಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲ.

ಇತ್ತಲೇ ಸುಳಿದು ಬರುತ್ತಿರುವ ಮಲೆಯಮ್ಮನನ್ನು ನೋಡಿದ ಬಸವ ಅವಳ ಕೈ ಸ್ಪರ್ಶಕ್ಕಾಗಿ ಹಾತೊರೆದು ತಾಯಿಯ ಹತ್ತಿರ ಕರುವೊಂದು ನಡೆದು ಹೋದಂತೆ ಹೋಗುತ್ತಿತ್ತು. ಇದನ್ನರಿಯದ ಜನ, ಬೀದಿಯಲ್ಲಿ ಕೈಲಾಗದ ಮುದುಕರು–ಮೋಟರು, ಹೆಂಗಸರು–ಮಕ್ಕಳು ಆತಂಕದಲ್ಲಿದ್ದು 'ಅಯ್ಯೋ ಬಡವರ ಹಣೆಬರ ಕೆಟ್ಟರೆ ಇಂಗೆ ನೋಡ್ರಪ್ಪಾ, ಆದಿ ಅನ್ನಲ್ಲ ಬೀದಿ ಅನ್ನಲ್ಲ ಜೀವ ಯಂಗೋಗುತ್ತೆ' ಎಂದು ಅಲ್ಲೆಲ್ಲೂ ಕಾಣದ ಶಕ್ತಿಗೆ ಕಾಪಾಡು, ಕಾಪಾಡು ಎಂದು ಅಂಗಲಾಚುತ್ತಿದ್ದರು. ಹೆರಿಗೆ ಎನ್ನುವುದು ಅನುರಾಗ, ಪ್ರೇಮ, ಸಂತೋಷ, ಸುಖ ದುಃಖಗಳ